ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 20-9-2016

## ಪತ್ರಿಕಾ ಆಮಂತ್ರಣ

1. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ 'ನೂತನ ಜಿ.ಎಂ.ಪಿ. ಲಸಿಕೆ ತಯಾರಿಕೆ ಸೌಲಭ್ಯ' 'ಲಸಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಘಟಕ' ಹಾಗೂ 'ಹೈನು ಮಹಾವಿದ್ಯಾಲಯದ ಮುಖ್ಯದ್ವಾರ' ದ ಉದ್ಘಾಟನಾ ಸಮಾರಂಭ

<u>ಘನ ಉಪಸ್ಥಿತರು</u>: ಡಿ.ವಿ ಸದಾನಂದಗೌಡ, ಕೇಂದ್ರ ಸಚಿವರು, ಅಂಕಿ-ಅಂಶ ಹಾಗೂ ಯೋಜನಾ ಅನುಷ್ಠಾನ ಸಚಿವಾಲಯ, ಭಾರತ ಸರ್ಕಾರ.

<u>ಜಿ.ಎಂ.ಪಿ. ಪ್ರಯೋಗಾಲಯ 2 ಮತ್ತು 3 ರ ಉದ್ಘಾಟನೆ</u>: ಎ. ಮಂಜು, ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು.
<u>ಸಂಶೋಧನೆ ಮತ್ತು ಅಭಿವೃದ್ಧಿ ಕಟ್ಟಡ ಉದ್ಘಾಟನೆ</u>: ಕೃಷ್ಣಬೈರೇಗೌಡ, ಕೃಷಿ ಇಲಾಖೆ ಸಚಿವರು.

ಸ್ಥಳ: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಕನ್ನಡ ಸಭಾಂಗಣ,
ಹೈನು ಮಹಾವಿದ್ಯಾಲಯ ಆವರಣ, ಹೆಬ್ಬಾಳ, ಬೆಂಗಳೂರು

ದಿನಾಂಕ: 21-09-2016, ಬುಧವಾರ, ಬೆಳಿಗ್ಗೆ 9-30 ಗಂಟೆಗೆ.
ವಿ.ಸೂ. : ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದೆ. ವಾರ್ತಾ ಸೌಧದಿಂದ ವಾಹನ ಅಂದು ಬೆಳಿಗ್ಗೆ 8-30 ಗಂಟೆಗೆ ನಿಗಧಿತ ಸ್ಥಳದತ್ತ ತೆರಳಲಿದೆ. ಹೆಚ್ಚಿನ ಮಾಹಿತಿಗಾಗಿ: ಶ್ರೀ ಚಂದ್ರನಾಯಕ್ 9448877926 ಸಂಪರ್ಕಿಸಬಹುದಾಗಿದೆ.

2. "ಇ-ಆಡಳಿತ ಅನುಷ್ಠಾನ ವಾರ್ಷಿಕೋತ್ಸವ ಮತ್ತು ಜಿಲ್ಲಾ ಕಚೇರಿಗಳ ಇ-ಆಡಳಿತ ವ್ಯವಸ್ಥೆಗೆ ಚಾಲನೆ"

ಚಾಲನೆ: ಶ್ರೀಮತಿ ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಸಚಿವೆ.

ದಿನಾಂಕ: 21-09-2016 ಬುಧವಾರ, ಮಧ್ಯಾಹ್ನ 3-00 ಗಂಟೆಗೆ

ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಕನ್ನಡ ಭವನ, ಬೆಂಗಳೂರು.

ಪತ್ರಿಕಾ ಪ್ರಕಟಣೆ

## ಸಚಿವ ಸಂಪುಟ ಸಭೆ

ಬೆಂಗಳೂರು ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ರಾಜ್ಯ ಸಚಿವ ಸಂಪುಟ ಸಭೆ ಸೆಪ್ಟೆಂಬರ್ 21 ರಂದು ಬೆಳಿಗ್ಗೆ 11-00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.

ಪಿಎಸ್ಐ:ಜಿಪಿಆರ್.

## ವಿವಿಧ ಜಾತಿ ಜನಾಂಗಗಳ ಬೇಡಿಕೆ ಕುರಿತಂತೆ ಬಹಿರಂಗ ವಿಚಾರಣೆ

ಬೆಂಗಳೂರು ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಕೋಲಾರ ಜಿಲ್ಲೆಯ ವಿವಿಧ ಜಾತಿ ಜನಾಂಗಗಳ ಬೇಡಿಕೆಗಳ ಕುರಿತು ಸೆಪ್ಟೆಂಬರ್ 22 ರಂದು ಬೆಳಿಗ್ಗೆ 11-00 ಗಂಟೆಗೆ ಕೋಲಾರದ ಚೆನ್ನಯ್ಯ ರಂಗಮಂದಿರದಲ್ಲಿ ಸಾರ್ವಜನಿಕ ಬಹಿರಂಗ ವಿಚಾರಣೆಯನ್ನು ನಡೆಸಲಿದೆ.

ನಾಗರೀಕರ ಯಾವುದೇ ವರ್ಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಬಂದ ಕೋರಿಕೆಗಳನ್ನು ಪರಿಶೀಲಿಸುವುದು ಮತ್ತು ಯಾವುದೇ ಹಿಂದುಳಿದ ವರ್ಗವನ್ನು ಅಂತಹ ಪಟ್ಟಿಯಲ್ಲಿ ಹೆಚ್ಚಾಗಿ ಸೇರಿಸಲಾಗಿದೆ ಎಂದು ಅಥವಾ ಸೇರಿಸಲಾಗಿಲ್ಲವೆಂದು ಬಂದ ದೂರುಗಳ ವಿಚಾರಣೆ ಮಾಡುವುದು.

ಸಾರ್ವಜನಿಕರಿಂದ ಸಂಘ ಸಂಸ್ಥೆಗಳಿಂದ ಜಾತಿ, ಉಪ ಜಾತಿ, ಪಂಗಡ, ಉಪ ಪಂಗಡ, ಬುಡಕಟ್ಟು ಹಾಗೂ ಸಮೂಹಗಳ ಪರವಾಗಿ ಆಯೋಗಕ್ಕೆ ಮನವಿಗಳನ್ನು ಆಹ್ವಾನಿಸಿದೆ.

ಆಯೋಗದ ವೆಬ್‌ಸೈಟ್ **www.karnataka.gov.in/kscbc** ರಡಿ **questionnaire click** ಮಾಡಿ ಪ್ರಶ್ನಾವಳಿಯನ್ನು ಪಡೆದು ಮನವಿದಾರರು ತಮ್ಮ ಮನವಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಭರ್ತಿಮಾಡಿ ಆಫಿಡವಿಟ್ ಮಾಡಿಸಿ ಹತ್ತು ಪ್ರತಿಗಳನ್ನು ಸಿದ್ದಪಡಿಸಿ ಸಂಬಂಧಪಟ್ಟ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೋಲಾರ ಇವರಿಗೆ ಸಲ್ಲಿಸಬಹುದು.

ತಮ್ಮ ಮನವಿಗಳಿಗೆ ಸಂಬಂಧಿಸಿದಂತೆ ಬಹಿರಂಗ ವಿಚಾರಣೆಯ ದಿವಸ ತಾವು ಖುದ್ದಾಗಿ ಅಥವಾ ನ್ಯಾಯವಾದಿಗಳ ಮೂಲಕ ತಮ್ಮ ಅಹವಾಲನ್ನು ಮಂಡಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಪ್ರಕಟಣೆ ತಿಳಿಸಿದೆ.

ಹೆಚ್‌ಕೆ:ಜಿಪಿಆರ್.

## ಯಶವಂತಪುರದಲ್ಲಿ ಸಾರಿಗೆ ಅದಾಲತ್

ಬೆಂಗಳೂರು ಸೆಪ್ಟೆಂಬರ್ 20 (ಕರ್ನಾಟಕ ವಾರ್ತೆ)

ಬೆಂಗಳೂರು (ಉತ್ತರ) ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಯಶವಂತಪುರ ಬೆಂಗಳೂರು – 560 022 ಇಲ್ಲಿ ಸೆಪ್ಟೆಂಬರ್ 26 ರಂದು ಮಧ್ಯಾಹ್ನ 3–00 ಗಂಟೆಗೆ ಸಾರಿಗೆ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಈ ಕಚೇರಿ ವ್ಯಾಪ್ತಿಗೆ ಬರುವ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಿ ಕಾನೂನು ರೀತ್ಯ ಸೂಕ್ತ ಪರಿಹಾರಗಳನ್ನು ಸೂಚಿಸಲು ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಗಳು ಅದಾಲತ್‌ನಲ್ಲಿ ಭಾಗವಹಿಸಲಿದ್ದಾರೆ. ಸಾರ್ವಜನಿಕರು ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕೋರಿದೆ.

ಪಿಎಸ್‌ಐ:ಜಿಪಿಆರ್.